ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 6, May-Jun 2020, 1-9
©*IIMRD*, Mysuru
IIMRD JOURNALS
www.iimrd.com

# ಕೆರೆಗೆ ಹಾರವಾದ ಹುಳಿಯಾರು ಕೆಂಚಮ್ಮ

ಅನಿತ.ಟಿ[1] ಮತ್ತು ಡಾ. ನಾಗರತ್ನಮ್ಮ ಎಸ್[2]

**ಪೀಠಿಕೆ**

ಜನಪದ ಕಥನ ಗೀತೆಗಳಲ್ಲಿ ತ್ಯಾಗ ಬಲಿದಾನಕ್ಕೆ ಸಂಬಂಧಪಟ್ಟಂತೆ ಅನೇಕ ಸ್ತ್ರೀ ಪಾತ್ರಗಳನ್ನು ಕಾಣಬಹುದು. ಆ ಸ್ತ್ರೀ ಪಾತ್ರಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದ ಸಂದರ್ಭ ಎಂದರೆ, ಕೆರೆಯ ನೀರು ಉಕ್ಕಿ ಹರಿದಾಗ, ಕೆರೆಯ ನೀರು ಬತ್ತಿದಾಗ ಅಥವಾ ಕೆರೆಯ ಏರಿಯು ಸಡಿಲವಾದಾಗ ಅತೃಪ್ತಿಗೊಂಡಿದ್ದು, ಏನಾದರೂ ಸಂಚಕಾರ ಕಾದಿದೆ ಎಂದು ಜನಪದರ ನಂಬಿಕೆಯಾಗಿತ್ತು. ಹಾಗಾಗಿ ಗಂಗೆಯನ್ನು ತೃಪ್ತಿಗೊಳಿಸುವ ಸಲುವಾಗಿ ಹೆಣ್ಣನ್ನು ಬಲಿ ಕೊಡಬೇಕು ಎಂಬುದು ಕೂಡ ಅವರ ನಂಬಿಕೆಯಾಗಿತ್ತು. ಹೆಣ್ಣನ್ನು ಬಲಿ ಕೊಟ್ಟರೆ ಊರಿನ ಜನರಿಗೆ, ಪ್ರಾಣಿ–ಪಕ್ಷಿಗಳನ್ನೊಳಗೊಂಡಂತೆ ಎಲ್ಲಾ ಒಟ್ಟಾರೆ ಜೀವಸಂಕುಲಕ್ಕೆ ಅನುಕೂಲವಾಗುತ್ತಿತ್ತು ಎಂದು ಭಾವಿಸುತ್ತಿದ್ದರು.

ಸಾಮನ್ಯವಾಗಿ ಊರಿನ ಯಜಮಾನ ಬಲಿದಾನಕ್ಕೆ ತನ್ನ ಮನೆಯ ಸೊಸೆಯನ್ನು ಬಲಿಕೊಡುತ್ತಿದ್ದ ಸೊಸೆಗೆ ಇಷ್ಟವಿರಲಿ, ಇಲ್ಲದಿರಲಿ ಹಿರಿಯರ ಮಾತಿಗೆ ಒಪ್ಪಿ ಸಮಾಜದ ಒಳಿತಿಗಾಗಿ ಬಲಿಯಾಗುತ್ತಿದ್ದಳು. ಮುಂದೆ ಆ ಊರಿನ ಜನರ ಕಣ್ಣಿಗೆ ದೇವತೆಯಾಗುತ್ತಿದ್ದಳು. ಸಮಷ್ಟಿಯ ಹಿತಕ್ಕಾಗಿ ತನ್ನ ಬದುಕನ್ನೆ ತ್ಯಾಗ ಮಾಡುವ ಸ್ತ್ರೀಯ ಪಾತ್ರಗಳಲ್ಲಿ ಕಂಡುಬಂದಿರುವ ಹಲವಾರು ಕಥನಗಳಲ್ಲಿ "ಹುಳಿಯಾರು ಕೆಂಚ್ಚಮ್ಮ"ನ ಪಾತ್ರವು ಒಂದು. ಪ್ರಸ್ತುತ ಲೇಖನದಲ್ಲಿ ತ್ಯಾಗ ಬಲಿದಾನವನ್ನು ಐತಿಹಾಸಿಕ ದೃಷ್ಟಿಯಿಂದ ವಿಮರ್ಷಿಸಲಾಗಿದೆ.

**ಹುಳಿಯಾರು ಗ್ರಾಮದ ಇತಿಹಾಸ**

ಕ್ರಿ.ಶ.1589ರ ಭೈರಪ್ಪ ನಾಯಕನ ಬೆಳವಾಡಿಯ ಶಿಲಾ ಶಾಸನ ಹಾಗೂ ಕ್ರಿ.ಶ.1736ರ ಮುದಿಯಪ್ಪ ನಾಯಕನ ಮೂಕನಾಯಕನ ಕೋಟೆಯ ತಾಮ್ರಶಾಸನದಲ್ಲಿ ಉಲ್ಲೇಖಿಸಿರುವಂತೆ ಇವುಗಳಿಂದ ಹಾಗಲವಾಡಿಯ ಸಂಸ್ಥಾನ ತುಮಕೂರು ಜಿಲ್ಲೆಯ ಬಹುಭಾಗವನ್ನು ಆಳಿದ ಒಂದು ಪ್ರಮುಖ ಅರಸು ಮನೆತನವಾಗಿದ್ದು, ಈ ಸಂಸ್ಥಾನ ಇಂದಿನ ತಾಲೂಕುಗಳಾದ ಗುಬ್ಬಿ, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ತಿಪಟೂರು ಹಾಗೂ ತುಮಕೂರು ತಾಲೂಕಿನ ಕೆಲವು ಭಾಗಗಳಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ಸಂಸ್ಥಾನವನ್ನು ಪಾಳೆಗಾರರಾದ ಹಾಗಲವಾಡಿ ನಾಯಕರು ಆಳಿರುವುದನ್ನುತಿಳಿಸುತ್ತದೆ.

---

[1] *ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56*

[2] *ಪ್ರಾಧ್ಯಾಪಕರು, ಇತಿಹಾಸ ವಿಭಾಗ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56*

ವಿಜಯನಗರ ಸಾಮ್ರಾಜ್ಯದ ಅಮರನಾಯಕರಲ್ಲಿ ಹಾಗಲವಾಡಿ ನಾಯಕರು ಒಬ್ಬರಾಗಿದ್ದಾರೆ. ವಿಜಯನಗರ ಅರಸರ ಸಮಕಾಲೀನರಾಗಿ, ಅವರ ಅಧೀನದಲ್ಲಿದ್ದು, ನಂತರ ವಿಜಯನಗರದ ಪತನದಿಂದ ಸ್ವತಂತ್ರರಾಗಿ ಮುಂದೆ ಹೈದರಾಲಿಯ ದಾಳಿಯೊಂದಿಗೆ ಈ ಸಂಸ್ಥಾನ ಅವನತಿಯಾಯಿತು. ಹಾಗಲವಾಡಿಯ ನಾಯಕರ ಮೂಲವನ್ನು ನೋಡುವುದಾದರೆ **"ಯೆರಿಮಾದಿನಾಯಕ"** ಮೂಲ ಪುರುಷನಾಗಿದ್ದು, ಈ ಸಂಸ್ಥಾನ ಸ್ಥಾಪಿಸುವುದಕ್ಕೆ ಮೊದಲು ಈಗಿನ ಆಂಧ್ರಪ್ರದೇಶದ **"ಅಧೋನಿ"** ತಾಲ್ಲೂಕಿನ **"ತುಂಮಳ"** ಪ್ರಾಂತ್ಯದಲ್ಲಿ ನೆಲೆಸಿದ್ದನು. ನಂತರ ಅಲ್ಲಿಂದ ತುಮಕೂರು ಜಿಲ್ಲೆಯಲ್ಲಿನ ಚಿಕ್ಕನಾಯಕನಹಳ್ಳಿ ಪ್ರದೇಶಕ್ಕೆ ಬಂದನು. ಮುಂದೆ ಈತನ ಬಗ್ಗೆ ಅಸ್ಪಷ್ಟವಾದ ಮಾಹಿತಿಯಿದ್ದು ನಿಡುಗಲ್ಲು ಚೋಳ ವಂಶದ ದೊರೆ **"ಇರುಂಗೊಳ"** ಎಂಬುವನು ಹುಳಿಯಾರನ್ನು ನಿರ್ಮಿಸಿದನು ಎಂಬುದಾಗಿದ್ದು ಈ ಊರು ಮುಂದೆ ಹೊಯ್ಸಳರು ಹಾಗೂ ಹೈದರಾಲಿಯ ಆಳ್ವಿಕೆಗೆ ಒಳಪಟ್ಟಂತ ಪ್ರದೇಶವಾಗಿದೆ ಎಂದು ಗುರುತಿಸಲಾಗಿದೆ.

ಹುಳಿಯಾರು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೋಬಳಿ ಕೇಂದ್ರವಾಗಿದೆ. ಇದು ಐತಿಹಾಸಿಕವಾಗಿಯೂ ಹಾಗೂ ಧಾರ್ಮಿಕವಾಗಿಯೂ ಪ್ರಸಿದ್ಧಿಯನ್ನು ಪಡೆದ ಊರಾಗಿದೆ. ಹುಳಿಯಾರು ಎನ್ನುವ ಹೆಸರು ಈ ಊರಿಗೆ ಬರಲು ಐತಿಹಾಸಿಕ ದಾಖಲೆ ಇದೆ. ಹುಳಿಯಾರು ಕೆರೆಯ ಅಂಗಳದಲ್ಲಿ ಹುಲಿ, ನಾಯಿ ಮತ್ತು ರಾಜನ ಚಿತ್ರಗಳು ಕೆತ್ತಲ್ಪಟ್ಟಿರುವ ಒಂದು ಪುರಾತನ ಶಿಲೆ ಇದೆ. ನಾಯಿಯು ಹುಲಿಯ ಮೇಲೆ ಎರಗಿದೆ. ಹುಲಿಯು ನಾಯಿಯ ಬಾಯನ್ನು ಕಚ್ಚಿದೆ. ರಾಜನು ತನ್ನೆರಡು ಕೈಗಳನ್ನು ನಾಯಿಯ ಬೆನ್ನಿನ ಮೇಲೆ ಊರಿ ನಿಂತಿದ್ದಾನೆ. ಇದನ್ನು ಗ್ರಾಮಸ್ಥರು "ನಾಯಿಕಲ್ಲು" ಎಂದು ಕರೆಯುತ್ತಾರೆ. **"ನಾಯಿ ಕಲ್ಲು"** ಮುಳುಗುವಷ್ಟು ನೀರು ಬಂದರೆ ಕೆರೆ ಕೋಡಿ ಬೀಳುವುದೆಂದು ಜನರ ನಂಬಿಕೆಯಾಗಿದ್ದು ನಾಯಿಯೇ ಹುಲಿಯ ಮೇಲೆರಗಿ ನಿಂತಿದ್ದರಿಂದ ಅದು ವೀರಭೂಮಿ ಎಂದಾಯಿತು. ಆದ್ದರಿಂದ ಇದಕ್ಕೆ ಹುಲಿಯೇರು ಎಂದು ಹೆಸರಾಗಿ ನಂತರದಲ್ಲಿ ಅದು ಹುಳಿಯಾರು ಎಂಬುದಾಗಿ ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

**ಕೆಂಚಮ್ಮನ ಕೆರೆಯ ಐತಿಹ್ಯ**

ಕೆಂಚಮ್ಮನ ಕೆರೆಯಲ್ಲಿ ಪ್ರಮುಖವಾಗಿ ಕೆಂಚಮ್ಮನ ಗುಡಿ, ಕೆಂಚಮ್ಮನ ತೋಪು. ಕೆಂಚಮ್ಮನ ಗುಂಡು, ಏರಿ ನೆಲ ಮಾಳಿಗೆಯಲ್ಲಿರುವ ಶ್ರೀಭೈರವ, ಸಿಹಿನೀರಿನ ಬಾವಿ ಅಂಶಗಳು ಕಂಡುಬರುತ್ತದೆ.

**ಮೌಖಿಕ ಮಾಹಿತಿ**

ಮೊದಲಿಗೆ ಕೆಂಚಮ್ಮನ ಕೆರೆಯ ಬಗ್ಗೆ ಮಾಹಿತಿಯನ್ನು ಪೂರ್ಣವಾಗಿ ನೀಡಿದ್ದು ಕೆಂಚಮ್ಮನ ಸೊಸೆಯ ಮನೆತನದವರಾದ ಶ್ರೀ ಚನ್ನಬಸಮ್ಮನವರು ತಾಯಿ ಕೆಂಚವ್ವನ ವಚನದ ಮೂಲಕ ಪರಿಚಹಿಸಿದರು.

***ಆಡಿಕೊಂಬೊರೇ ಇರಬ್ಯಾಡಿ ಆಕಳಿಸೊರೇ ಇರಬ್ಯಾಡಿ***

***ತೂಕಡಿಸೊರೆ ಇರಬ್ಯಾಡಿ ನಿದ್ರೆಗಣ್ಣೊರೇ ಇರಬ್ಯಾಡಿ***

***ಹತ್ತುವಾರದ ಓಲೆಯ ತಗೊಂಡು***

*ಓದುವೆ ನಿನ್ನ ಮೊದಲಿಂದ, ತುದಿಯಿಂದ*

*ತಾಯಿ ಕೆಂಚವ್ವನ ವಚನವ*

*ಸತ್ಯ ಶರಣೆ ಬಾರೆ ಪಟ್ಟದ ನಾಗತಿ ಬಾರೆ*

*ಸೆಟ್ಟಿ ಮಾರಪ್ಪನ ಸೊಸೆ ಬಾರೆ ಕೆಂಚವ್ವ*

*ತಾಯಿ ಬಾರೆ ನಮ್ಮ ವಚನಕೆ ॥*

ಕೆಂಚಮ್ಮನ ನಾಲ್ಕನೆ ತಲೆಮಾರಿನವರಾದ ಚೆನ್ನಬಸಮ್ಮನವರು ಕೆಂಚಮ್ಮನ ಐತಿಹಾಸಿಕ ಹಿನ್ನಲೆಯನ್ನು ಎಳೆ ಎಳೆಯಾಗಿ ವಿವರಿಸಿದರು. ಚನ್ನಬಸಮ್ಮನವರು ಹೇಳಿದ ಪ್ರಕಾರ ಕೆಂಚಮ್ಮನ ತವರೂರು ಜಾನಕಲ್ಲು ಇಲ್ಲಿಯ ಚೆನ್ನಮ್ಮನ ಮಗಳೆ ಕೆಂಚಮ್ಮ, ಹುಳಿಯಾರಿನ ಸೆಟ್ಟಿ ಮಾರಪ್ಪನ ಹೆಂಡತಿ ಬೊಮ್ಮವ್ವ ತನ್ನ ಮಗನಿಗೆ ಮದುವೆ ಮಾಡುವ ಸಲುವಾಗಿ ಜಾನಕಲ್ಲಿಗೆ ಹೋಗಿ ಕೆಂಚವ್ವನನ್ನು ನೋಡಿ ಬಂದು ಲಗ್ನ ಕಟ್ಟಿಸುತ್ತಾರೆ. ಮುಂದೆ ಅತ್ತೆ ಮನೆ ಸೇರಿದ ಕೆಂಚವ್ವ ಬೆಳಗಾಗುವುದರೊಳಗೆ ಎದ್ದು ಎಲ್ಲಾ ಕೆಲಸ ಮಾಡಿ ಮುಗಿಸಿರುತ್ತಿದ್ದಳು. ಇದನ್ನು ಗಮನಿಸುತ್ತಿದ್ದ ಮಾವ ಮಾರಪ್ಪ ಕೆಂಚವ್ವನನ್ನು ಪರೀಕ್ಷೆ ಮಾಡಲೆಂದು ಸಗಣಿ ಹಾಕುವ ಮಂಕರಿಯಲ್ಲಿ ದಪ್ಪ ಗುಂಡೊಂದನ್ನು ಹಾಕಿ ಪರೀಕ್ಷಿಸುತ್ತಾನೆ. ಅದರಲ್ಲಿ ಕೆಂಚಮ್ಮ ಯಶಸ್ವಿಯಾಗುತ್ತಾಳೆ ಇದೇ ಮುಂದೆ ಕುರುಹಾಗಿ **"ಕೆಂಚವ್ವನ ಗುಂಡು"** ಇಂದಿಗೂ ಇದೆ.

ಕೆಂಚವ್ವನ ತೋಪು ಇಲ್ಲಿ ನಾಲ್ಕು ಹುಣಸೇ ಮರಗಳನ್ನು ಕಾಣುತ್ತೇವೆ ಆ ಹುಣಿಸೆ ಮರಕ್ಕೆ ತೊಟ್ಟಿಲನ್ನು ಕಟ್ಟಿ ತಮ್ಮ ಕಂದನ್ನು ಮಲಗಿಸಿ ದೇವಕನ್ಯೆಯ ಜೊತೆ ಹೋಗುತ್ತಾಳೆ. ಕೆಂಚಮ್ಮನನ್ನು ಭಕ್ತಿಯಿಂದ ನೆನೆದು ಬಡವರು ತಮ್ಮ ಕಷ್ಟವನ್ನು ಹೇಳಿಕೊಂಡಾಗ ಕೆಂಚವ್ವನ ಧ್ವನಿ ಕೇಳಿಸುತ್ತಿತ್ತು. ಅಲ್ಲದೇ ಕರ್ಪೂರ ಹಚ್ಚಿ ನೀರಿಗೆ ಬಿಟ್ಟಾಗ ಅದು ಎಲ್ಲಿ ಹೋಗಿ ನಿಲ್ಲುತ್ತದೋ ಅಲ್ಲಿ ನಾನು ನಿಲ್ಲುತ್ತೇನೆ ಎಂದು ಹೇಳಿತ್ತಿದ್ದರಂತೆ. ಅದರಂತೆ ಜನರಿಗೆ ಒಡವೆಗಳನ್ನು ಶುಭಕಾರ್ಯಗಳಿಗೆ ದಯಪಾಲಿಸುತ್ತಿದ್ದರೆಂದು ನಂಬಿಕೆ ಇತ್ತು. ಒಮ್ಮೆ ಊರಿನ ನಾಯಕನ ಹೊಲಕ್ಕೆ ಹಸು, ಎಮ್ಮೆ ನುಗ್ಗಿ ಬೆಳೆಯನ್ನು ತಿಂದು ಹಾಳು ಮಾಡಿದ್ದರಿಂದ ಕೋಪಗೊಂಡ ಊರಿನ ನಾಯಕ ಕೆರೆ ಏರಿಯ ಮ್ಯಾಲೆ ಬಂದು ಕೆಂಚಮ್ಮನನ್ನು ಕರೆದು ನಿನ್ನ ಸೊಲ್ಲು ಇನ್ನು ಅಡಗಲಿಲ್ಲವೇ ಎಂದು ಕೇಳಿದಾಗ ಅಂದಿನಿಂದ ಮೌನಿಯಾಗುತ್ತಾಳೆ. ಆಗ ಸಿಹಿ ನೀರಿನ ಬಾವಿ ಇರುವ ಸ್ಥಳಗಳಲ್ಲಿ ಈಕೆ ನೆಲೆ ನಿಂತಿದ್ದ ಜಾಗ ಮತ್ತು ಅಂದಿನಿಂದಲೂ ಜನ ಪೂಜೆ ಮಾಡುತ್ತಿದ್ದ ಗಂಗಮ್ಮನ ಸ್ಥಳ ಎಂದು ಪ್ರಸಿದ್ಧಿಯಾಗಿ ಜಾತ್ರೆ ಸಂದರ್ಭದಲ್ಲಿ ಕಳಸಕ್ಕೆ ಇದೇ ಸಿಹಿ ನೀರನ್ನು ಕಳಸಕ್ಕೆ ಬಳಸುತ್ತಾ ಬಳಸಬೇಕೆಂಬ ಪ್ರತೀತಿ ಇದೆ.

ತಾಯಿ ಕೆಂಚಮ್ಮ ಸತ್ಯ ಶರಣೆ, ಸೆಟ್ಟಿ ಮಾರಪ್ಪನ ಸೊಸೆಯನ್ನು ಬಹಳ ಭಯ ಭಕ್ತಿಯಿಂದ ಪೂಜಿಸುವ ವಾಡಿಕೆ ಇಂದಿಗೂ ನಡೆದುಕೊಂಡು ಬಂದಿದೆ ಹೆಣ್ಣುಮಕ್ಕಳು ಹುಟ್ಟಿದ ಮನೆಗೂ ಸೇರಿದ ಮನೆಗೂ **"ಹುಲ್ಲು ತಾರದೇ ಹೂವು ತರಬೇಕು"** ಅಂತಯೇ ಕೆಂಚಮ್ಮನು ಎರಡು ಮನೆಗಳನ್ನು ಬೆಳಗಿದ ಮಹಾ ಪುಣ್ಯವತಿ.

ಹುಳಿಯಾರಿನ ಸೆಟ್ಟಿ ಮಾರಪ್ಪನ ಹೆಂಡತಿ ಬೊಮ್ಮವ್ವ ತನ್ನ ಮಗನಾದ ಗಿರಿಯಣ್ಣನ ಮದುವೆಯನ್ನು ಜಾನಕಲ್ಲಿನಲ್ಲಿರುವ ತನ್ನ ಅಣ್ಣನ ಮಗಳಾದ ಕೆಂಚವ್ವನೊಂದಿಗೆ ಮಾಡಬಯಸುತ್ತಾಳೆ.

ಹೆಣ್ಣು ಗಂಡಿನ ವಯಸ್ಸನ್ನು ಗಮನಿಸಿದಾಗ ಗಿರಿಯಣ್ಣನಿಗೆ 10 ವರ್ಷ ಕೆಂಚವ್ವನಿಗೆ 7 ವರ್ಷಗಳಾಗಿದ್ದು, ಅದೊಂದು ಬಾಲ್ಯ ವಿವಾಹವೆಂದು ತಿಳಿದುಬರುತ್ತದೆ.

*ಹತ್ತು ವರ್ಷದ ಮಗನಾದ ಗಿರಿಯಣ್ಣ ಗಂಡಿಗೂ*

*ಏಳೇ ವರ್ಷದ ಕೆಂಚವ್ವ ಹೆಣ್ಣಿಗೂ*

*ಮಾಡಬೇಕು ಮದುವೆಯ*

*ತಾಯೊಂದು ಯೋಚನೆ ಮಾಡುತ್ತಾಳೆ/*

ಬೊಮ್ಮವ್ವ ಹೆಣ್ಣು ಕೇಳುವುದಕ್ಕಾಗಿ ಜಾನಕಲ್ಲಿಗೆ ಹೋಗುತ್ತಾಳೆ. ತನ್ನ ಮನೆಗೆ ಬಂದ ತಂಗಿಯನ್ನು ಅಣ್ಣ ಬಹಳ ಪ್ರೀತಿಯಿಂದ ಸ್ವಾಗತಿಸುತ್ತಾನೆ, ಅಣ್ಣ ತಂಗಿ ಇಬ್ಬರೂ ಹೆಣ್ಣು ಗಂಡಿನ ತಾರಬಲವನ್ನು ವಿಚಾರಿಸಲು ಶಂಭು ಜೋಯಿಸರ ಮನೆಗೆ ಹೋಗುತ್ತಾರೆ. ವೀಳ್ಯದೆಲೆಯಲ್ಲಿ ದಕ್ಷಿಣೆಯನ್ನು ಇಟ್ಟು ಇಬ್ಬರ ತಾರಬಲವನ್ನು ಕೇಳಿದ್ದಾರೆ. ಅಂದು ಇವರಿಬ್ಬರ ತಾರಬಲ ಬಹಳ ಪ್ರಶಸ್ತವಾಗಿದೆಯೆಂದು ಜೋಯಿಸರು ತಿಳಿಸಿದಾಗ ಇವರಿಗೆ ಹೆಚ್ಚಿನ ಸಂತೋಷವಾಯಿತು. ಬೊಮ್ಮವ್ವ ಅಣ್ಣನ ಮನೆಯಲ್ಲಿ ಊಟ ಮಾಡಿಕೊಂಡು ಹುಳಿಯಾರಿಗೆ ಹಿಂತಿರುಗಿ ಬರುತ್ತಾಳೆ. ತನ್ನ ಮಗನ ಮದುವೆಯನ್ನು ಮಾಡಲು ಎಲ್ಲ ಸಿದ್ಧತೆಗಳನ್ನು ಮಾಡತೊಡಗುತ್ತಾಳೆ. ಬಂಧು ಬಳಗವನ್ನೆಲ್ಲಾ ಕರೆಸುತ್ತಾಳೆ. ಹಸೆಮಣೆಯ ಸಿಂಗಾರ ಮಾಡಿ ಭತ್ತ ಕುಟ್ಟುವ ಹಾಡು ಹೇಳುತ್ತಾ ಬೆರೆಯುತ್ತಾರೆ. ಧಾರೆಯ ಮೂಹೂರ್ತಕ್ಕೆ ಎಲ್ಲಾ ಅಣಿಯಾಯಿತು. ಎಲ್ಲರ ಸಮ್ಮುಖದಲ್ಲಿಯೂ ಅಗ್ನಿ ಸಾಕ್ಷಿಯ ಎದುರಿನಲ್ಲಿ ಕೆಂಚವ್ವ ಮತ್ತು ಗಿರಿಯಣ್ಣ ಮದುವೆ ನೆರವೇರಿತು. ಬೊಮ್ಮವ್ವ ಹೆಣ್ಣು ಗಂಡನ್ನು ಕರೆದುಕೊಂಡು ಜಾನಕಲ್ಲಿನಿಂದ ಹುಳಿಯಾರಿಗೆ ಬರುತ್ತಾಳೆ. ಸಂಭ್ರಮದಿಂದ ಮನೆ ತುಂಬಿಸಿಕೊಂಡು ಬಂದು ಬಳಗವನ್ನು ಸಂತೋಷದಿಂದ ಬೀಳ್ಕೊಡುತ್ತಾಳೆ. ಕಾಲ ಕಳೆದಂತೆ ಕೆಂಚಮ್ಮ ಮಾವನ ಮನೆಯ ನಿತ್ಯದ ಕೆಲಸದಲ್ಲಿ ತೊಡಗುತ್ತಾಳೆ. ಮನೆಯ ಬೆಟ್ಟದಷ್ಟು ಕೆಲಸವನ್ನು ಅವಳೊಬ್ಬಳೆ ಮಾಡುತ್ತಾ ಮಾವನ ಮನೆಯ ಯಾವ ಕೆಲಸವು ಅಸಾಧ್ಯವಾಗಿ ಕಾಣದಂತೆ ಮಾಡುತ್ತಾಳೆ. ಇದು ಮಾರಪ್ಪಗೌಡ ಹಾಗೂ ಬೊಮ್ಮವ್ವರಿಗೂ ಆಶ್ಚರ್ಯಗೊಳ್ಳುವಂತೆ ಕಾಣುತ್ತದೆ. ಮಾವ ಸೊಸೆಯ ಈ ಶಕ್ತಿಯನ್ನು ಪರೀಕ್ಷಿಸಲು ಮುಂದಾಗುತ್ತಾನೆ. ಕೆಂಚವ್ವ ದಿನಲೂ ದನ ಕರುಗಳ ಸಗಣಿಯನ್ನು ತಿಪ್ಪಗೆ ಹಾಕಲು ಬಳಸುತ್ತಿದ್ದ ಮಂಕರಿಗೆ ಗುಂಡು ಕಲ್ಲನ್ನು ಹಾಕಿ ಅದರ ಮೇಲೆ ಸಗಣಿಯಿಂದ ಮುಚ್ಚುತ್ತಾನೆ. ಇದನ್ನು ನೋಡಿ ಕೆಂಚಮ್ಮ ಯಾವ ಮಾತನ್ನು ಆಡದೇ ಅದನ್ನು ಎತ್ತಿಕೊಂಡು ಹೋಗಿ ಕಸ ಹಾಕಿ ಬರುತ್ತಾಳೆ. ಇದೇ ರೀತಿ ಮುಂದುವರೆದಾಗ ಸಿಟ್ಟುಗೊಂಡು ತನ್ನ ಶಕ್ತಿಯನ್ನೇ ಪರೀಕ್ಷೆ ಮಾಡಲು ಬಂದಂತ ಗುಂಡನ್ನು ಕಂಡು ಈ ರೀತಿಯಾಗಿ ಶಾಪ ಕೊಡುತ್ತಾಳೆ.

*ಕಿತ್ತಾರೆ ಗುಂಡೇ ಬರಬ್ಯಾಡ*

*ನೆಟ್ಟರೆ ಗುಂಡೆ ಬರಬ್ಯಾಡ*

ಎಂದು ಹೇಳಿ ಮನೆಗೆ ಹಿಂತಿರುಗಿ ಬರುವಾಗ ಋತುಮತಿಯಾಗುತ್ತಾಳೆ. ತನ್ನ ಶರೀರದಲ್ಲಾದ ಬದಲಾವಣೆಯನ್ನು ಕಂಡ ಕೆಂಚವ್ವ ತನ್ನ ಅತ್ತೆ ಬೊಮ್ಮವ್ವನಿಗೆ ಹೇಳುತ್ತಾಳೆ. ಈ ಮಾತು ಕೇಳಿ ಅತ್ತೆಗೆ

ಅಪಾರ ಆನಂದವಾಗುತ್ತದೆ. ಅತ್ತೆ ಸಂಪ್ರದಾಯದಂತೆ ಋತು ನಕ್ಷತ್ರದ ಫಲವನ್ನು ಕೇಳಲು ಜೋಯಿಸರ ಮನೆಗೆ ಹೋಗುತ್ತಾಳೆ. ಜೋಯಿಸರು ಈ ರೀತಿ ನುಡಿಯುತ್ತಾರೆ.

*ಶುಕ್ರವಾರ ನೀ ಸ್ತ್ರೀ ಮೈನೆರೆದವಳೇ*

*ತಂದೋರ ಮನೆಗೆ ಜಯಾ ಜಯಾ*

*ಒಂದೇ ಕಂದಯ್ಯನ ಫಲವೈತೆ*

*ಒಡವಿಗೆ ಹೋಗುತ್ತಾಳೆ*

*ಓದಿ ಬರೆದವಳೇ ಹಣೆಯಾಗಿ*

ಕೆಂಚಮ್ಮ ಒಡವಿಗೆ ಹೋಗಲೇ ಬೇಕಾಗಿರುವುದು ವಿಧಿ ಲಿಖಿತ ಎಂಬುದು ಜೋಯಿಸರ ಹೇಳಿಕೆಯಾಗಿರುತ್ತದೆ.

*ನನ್ನ ಬಾಳ ಹೆಣ್ಣಿಗೆ ಏನು ಕುಂದನು ನುಡಿದಯ್ಯಾ?*

*ನಿಮ್ಮ ಪುಸ್ತಕವ ಬೆಂಕಿಗೆ ಹಾಕಿ ಚಂದ ಚಂದಕೆ ಉರುವಯ್ಯಾ*

*ಜೋಯಿಸರ ಮುಂದೆ ಬರುವುದಾ ಒಬ್ಬರು ಅರಿಯರು*

ಎಂದು ಹೇಳುವ ಈ ಮಾತಿನಲ್ಲಿ ಕೆಂಚವ್ವನಿಗೆ ಅತ್ತೇಯಾಗಿರದೇ ಮಾತೆಯ ಮಮತೆಯನ್ನು ನೀಡಿದ್ದಳು. ತನ್ನ ಮುದ್ದಿನ ಸೊಸೆಗೆ ನಿರ್ಮಿಸಿರುವ ವೈಭವದ ಗುಡಿಸಲಿನ ವರ್ಣನೆ ಈ ರೀತಿ ಇದೆ.

*ಬಂದಾಳು ಕೆಂಚವ್ವ ಬೊಮ್ಮವ್ವನ ಅರಮನೆಗೆ*

*ಆಕಾಶದಗಲ ತೋಪು ಕಟ್ಟಿ ಸೋಳೆ ಆಕೆಗೆ ಗುಡಿಸಲರಚಿಸೋಳೆ*

*ಅಂಬರದ ತೆಂಗಿನ ಕಡಿಸಿ ರಂಟೆಗೆ ಗುಡಿಸಲು ಕಟ್ಟಿಸೋಳೆ*

*ತಂದನಾ ನಾ ನಾ ತಾನಾನಾ ನಾ ನಯ್ಯ ತಾನಾನಾ*

ಎಂದು ಹಾಡುತ್ತಾಳೆ. ಊರು ಕೇರಿಯ ಜನರನ್ನೆಲ್ಲಾ ಕರೆಸಿ ಋತುಮತಿಗೆ ಸ್ನಾನ ಮಾಡಿಸುತ್ತಿರುವಾಗ ಸಣ್ಣ ಪಂಡಿತನೊಬ್ಬ ಬರುತ್ತಾನೆ. ಅವನೇನಾದರೂ ಶುಭಾ ಫಲವನ್ನು ನುಡಿಯಬಹುದೆಂದು ತಿಳಿದು ಬೊಮ್ಮವ್ವ ಋತು ನಕ್ಷತ್ರದ ಫಲವನ್ನು ಕೇಳುತ್ತಾಳೆ. ಆದರೆ ಅವನೂ ಸಹ ಜೋಯಿಸರೇ ಹೇಳಿದ ಮಾತನ್ನು ಹೇಳುತ್ತಾನೆ. ಆದರೂ ಸಹ ಬೊಮ್ಮವ್ವ ಎದೆಗುಂದದೆ ಕಾಣಿಕೆಯನ್ನು ಕೊಟ್ಟು ಕಳುಹಿಸುತ್ತಾಳೆ.

ಋತುಮತಿಯಾದ ಕೆಂಚಮ್ಮನಿಗೆ ಮನೆಯ ಮುಂದೆ ಓಲೆ ಹಾಕಿ ನೀರಿಗೆ ನಾನಾ ತರಹದ ಬೇರುಗಳನ್ನು ಹಾಕಿ ನೀರು ಕಾಯಿಸಿ ಸ್ನಾನ ಮಾಡಿಸಿ ಹಟ್ಟಿಯ ಗರತಿಯರು ಮತ್ತು ಅವಳ ಗೆಳತಿಯರಿಂದ ಮಡಿಲು ತುಂಬುವ ಕೆಲಸವನ್ನು ಮಾಡಿಸುತ್ತಾಳೆ. 12 ದಿನಗಳ ಗುಡಿಸಲಿನಲ್ಲಿ ಇರಿಸುತ್ತಾರೆ. ನಂತರ ತನ್ನ ಗುಡಿಸಲ ಗರಿಯನ್ನು ಮೂರು ಹೊರೆ ಕಟ್ಟಿ ಮೂರು ಸಲ ಹೊರಗೆ ಎಸೆದು ಬರುವ

ಪದ್ಧತಿಯಂತೆ ಕೆಂಚಮ್ಮನು 12ನೇ ದಿನ ಸ್ನಾನ ಮಾಡಿಕೊಂಡು ಮನೆಯೊಳಗೆ ಹೋಗುತ್ತಾಳೆ. ಹದಿನಾರನೇ ದಿನಕ್ಕೆ ಕೆಂಚವ್ವನ ಪ್ರಸ್ತ ಮಾಡುತ್ತಾರೆ. ಇದು ಅತ್ತೇ ಮಾವರಿಬ್ಬರಿಗೂ ಸಂತೋಷವನ್ನುಂಟು ಮಾಡುತ್ತದೆ.  ದಿನ ಕಳೆದಂತೆ ಕೆಂಚವ್ವ ಗರ್ಭವತಿಯಾಗುತ್ತಾಳೆ. ಈ ವಿಷಯ ಮನೆ ಮಂದಿಗೆಲ್ಲ ಹಿಗ್ಗನ್ನು ತರುತ್ತದೆ. ತನ್ನ ಮುದ್ದಿನ ಸೊಸೆಯ ಬಸುರಿ ಬಯಕೆಗಳನ್ನೆಲ್ಲಾ ಈಡೇರಿಸುತ್ತಾರೆ.

ಒಂಬತ್ತು ತಿಂಗಳು ತುಂಬಿದ ನಂತರ ಕೆಂಚಮ್ಮನಿಗೆ ಪ್ರಸವ ವೇದನೆ ಉಂಟಾಗುತ್ತದೆ. ಸೊಸೆಯ ಮಾತನ್ನು ಕೇಳಿದ ಬೊಮ್ಮವ್ವ, ಮಾರಪ್ಪಗೌಡನನ್ನು ಸೂಲಗಿತ್ತಿ ಅಕ್ಕ ಸಂಗಮ್ಮನನ್ನು ಕರೆಯಲು ಕಳುಹಿಸುತ್ತಾಳೆ. ಮಾರಪ್ಪಗೌಡ ಸೂಲಗಿತ್ತಿಯ ಮನೆ ಹುಡುಕಿ ಕರೆತರುತ್ತಾನೆ ಪ್ರಸವ ವೈರಾಗ್ಯದಲ್ಲಿ ಹೆಣ್ಣು ಪ್ರಸವ ಕಾಲದ ನೋವಿನಿಂದ ಮತ್ತೆ ಗರ್ಭವತಿಯಾಗುವ ಆಸೆಯನ್ನು ತ್ಯಜಿಸುತ್ತಾಳೆ ಎಂಬಂತೆ ಕೆಂಚಮ್ಮನಿಗೂ ಈ ರೀತಿಯ ಅನುಭವವಾಗುತ್ತದೆ. ಇಂಥ ಸಮಯದಲ್ಲಿ ತನ್ನ ತಾಯಿ ಅಕ್ಕ ತಂಗಿಯರು ತನ್ನ ಹತ್ತಿರದಲ್ಲಿ ಇಲ್ಲದಿರುವ ಸಂಕಟವನ್ನು ಕೆಂಚವ್ವ ತನ್ನ ಅತ್ತೆಯಲ್ಲಿ ಹೇಳಿಕೊಳ್ಳುತ್ತಾಳೆ. ಕೆಲ ದಿನಗಳಲ್ಲಿ ಕೆಂಚಮ್ಮನಿಗೆ ಗಂಡು ಮಗುವಾಗುತ್ತದೆ. ಅತ್ತೆ ಮಾವಂದಿರ ಆನಂದಕ್ಕೆ ಪಾರವೇ ಇಲ್ಲ. ತನ್ನ ನೆರೆಹೊರೆಯವರಿಗೆಲ್ಲಾ ವಿಷಯ ತಿಳಿಸುತ್ತಾ ಸಂಭ್ರಮವನ್ನು ವ್ಯಕ್ತಪಡಿಸುತ್ತಾಳೆ. ಕೆಂಚಮ್ಮನ ಮಗುವಿಗೆ ಐದು ತಿಂಗಳು ತುಂಬಿದವು. ಪದ್ಧತಿಯಂತೆ ಊರ ಕೆರೆಯಲ್ಲಿ ಕೆಂಚಮ್ಮ ಗಂಗಮ್ಮನನ್ನು ಮಾಡಬೇಕು ಏಳು ಬಂಡಿಗಳಲ್ಲಿ ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ಕೆರೆಯ ಬಳಿಗೆ ಕೆಂಚಮ್ಮ ಹೋಗುತ್ತಾಳೆ. ಗಂಗಮ್ಮನ ಪೂಜೆ ಮಾಡಿ ಮೂರು ಪ್ರದಕ್ಷಿಣೆ ಸುತ್ತುತ್ತಿರುವಾಗ ದೇವಗನ್ನೆಯರು ಅವಳ ಸೆರಗನ್ನು ಹಿಡಿದೆಳೆದು ಅವಳ ತಾಯಿ ಗಂಗಾ ಮಾತೆಗೆ ಕೊಟ್ಟಿದ್ದ ವಚನವನ್ನು ಜ್ಞಾಪಿಸುತ್ತಾರೆ.

ಕೆಂಚಮ್ಮನ ತಾಯಿ ಚನ್ನಮ್ಮ ಗರ್ಭವತಿಯಾಗಿದ್ದಾಗ ಧಾರಕಾರವಾಗಿ ಸುರಿಯುವ ಮಳೆಯಿಂದ ಹುಳಿಯಾರು ಕೆರೆಗೆ ಹೋಗುವ ಹೊಳೆ ಭೋರ್ಗರೆಯುತ್ತಾ ಹರಿಯುತ್ತಿರುತ್ತದೆ. ಚನ್ನಮ್ಮ ಆ ಹೊಳೆಯನ್ನು ದಾಟಿ ತನ್ನ ಊರಿಗೆ ಹೋಗಬೇಕಾಗಿರುತ್ತದೆ. ಆಗ ಅವಳು ಗಂಗೆಯಲ್ಲಿ ಗಂಗಾ ಮಾತೆ ಈಗ ನೀನು ನನಗೆ ದಾರಿಬಿಡು ನನ್ನ ಪ್ರಸವದ ನಂತರ ನಾನು ನನ್ನ ಕಂದನ ಜೊತೇಲಿ ತೊಟ್ಟಿಲ ಸಮೇತಳಾಗಿ ಬರುವೆನು ಎಂದು ಪ್ರಾರ್ಥಿಸಿಕೊಳ್ಳುತ್ತಾಳೆ. ಆಗ ಹೊಳೆಯು ಇಬ್ಭಾಗವಾಗಿ ದಾರಿ ಬಿಡುತ್ತದೆ. ನನ್ನ ತಾಯಿ ಗಂಗೆಯ ಹರಕೆಯನ್ನು ತೀರಿಸಲ್ಲಿಲ್ಲ ಅವಳ ಮಗಳಾದ ನೀನು ಅವಳ ಹರಕೆಯನ್ನು ತೀರಿಸು ಎಂದು ದೇವಗನ್ನೆಯರು ಹೇಳುತ್ತಾರೆ. ಇದಕ್ಕೆ ಕೆಂಚಮ್ಮ ಸಮ್ಮತಿಸುತ್ತಾಳೆ ಈ ವಿಚಾರವನ್ನು ತನ್ನ ಅತ್ತೆ, ಮಾವ ಮತ್ತು ಗಂಡನಿಗೂ ಹೇಳುತ್ತಾಳೆ.

ದೇವಗನ್ನೆಯರ ಹಸ್ತ ಸ್ಪರ್ಶದಿಂದ ಕೆಂಚಮ್ಮನಿಗೆ ದೈವಶಕ್ತಿ ಪ್ರಾಪ್ತವಾಗುತ್ತದೆ. ಅವಳ ದಿವ್ಯ ದೃಷ್ಟಿಗೆ ತನ್ನ ತಂದೆ ತಾಯಿ ದಂಡು ಸಮೇತರಾಗಿ ಮಾರಪ್ಪನ ತಲೆ ಒಡೆಯಲು ಬರುತ್ತಿರುವುದು ಗೋಚರವಾಗುತ್ತದೆ. ಕೋಟೆಯ ಬಾಗಿಲನ್ನು ಹಾಕಿಸಿ ಮಾವನ ಪ್ರಾಣ ರಕ್ಷಣೆಯನ್ನು ಮಾಡುವುದು ಮತ್ತು ತಾಯಿ ಮಾಡಿದ ಹರಕೆಯನ್ನು ಜ್ಞಾಪಿಸಿ ಅದನ್ನು ತೀರಿಸುವುದಕ್ಕೆ ದೇವಕನ್ಯೆಯರು ಪ್ರತ್ಯೇಕ್ಷರಾದ ವಿಷಯವನ್ನು ತಾಯಿ ತಂದೆಗೆ ತಿಳಿಸಿ ಅವರನ್ನು ಹಿಂತಿರುಗಿಸುವ ವಿಚಾರ ಇಲ್ಲಿ ಮುಖ್ಯವಾದ ತಿರುವನ್ನು ಪಡೆಯುತ್ತದೆ. ಕೆಂಚಮ್ಮ ತನ್ನ ಅತ್ತೆ ಮಾವಂದಿರ ಪ್ರೀತಿಗೆ ಕೃತಜ್ಞಳಾಗಿರುವುದು ಮತ್ತು ತನ್ನ ತಾಯಿಯ ಹರಕೆಯನ್ನು  ತೀರಿಸುವುದು ಈ ಕಥೆಯಲ್ಲಿ ಕಂಡು ಬಂದಿದೆ.

ಕೆಂಚಮ್ಮ ಅತ್ತೆ ಮಾವ ಮತ್ತು ಗಂಡನ ಜೊತೆಯಲ್ಲಿ ನೆಮ್ಮದಿಯಿಂದ ಇದ್ದಳು. ಅವರಿಂದ ದೂರ ಬಹು ದೂರು ಹೋಗುತ್ತಿದ್ದಾಳೆ. ಆ ಸಂಕಟ ಹಾಗೂ ದು:ಖ ದುಮ್ಮಾನವನ್ನು ಅನುಭವಿಸುವ ಮತ್ತು ಸಹಿಸುವ ಹೃದಯ ಯಾರಿಗಿದೆ. ಅತ್ತೆ ಮಾವಂದಿರನ್ನು ಬೀಳ್ಕೊಡುವ ಪ್ರಸಂಗದಲ್ಲಿ ಅವರ ದು:ಖದ ಕಟ್ಟೆ ಒಡೆದು ಹೊರು ಹೊಮ್ಮುತ್ತದೆ. ಜಾನಕಲ್ಲಿಗೆ ಹೋಗಿ ತವರು ಮನೆಯಿಂದ ಕತ್ತಿ ಕಟಾರಿಯೊಡನೆ ತಂದೆ ತಾಯಿ ಬಂಧುಬಳಗವೆಲ್ಲಾ ಧಾವಿಸಿ ಬರುತ್ತಾರೆ. ಕೆಂಚವ್ವನ ಮಗುವನ್ನು ತರಿಸಿಕೊಂಡು ನೋಡುತ್ತಾರೆ.

*ಬಾಲಾನ ನೋಡಿದರೆ ಬಾಳೆಹಣ್ಣಿನ ಬಣ್ಣ*

*ಇದು ಎನೆ ಕೆಂಚವ್ವ ಹೊಸ ಮಾತು ಅನ್ನೋ ಹೊತ್ಗೆ*

*ಗಂಗೆ ಮುಟ್ಟಿದ ಬಗೆ ಕಾಣೆ*

*ಹೆಣ್ಣ ಹಡೆದರೆ ಕೊಡುತೀನಿ*

*ಗಂಡ ಹಡೆದರೆ ಕೊಡುತೀನಿ*

*ಬಾಸೆ ಮಾಡಿದ ಬಗೆ ಕಾಣೆ ಚೆನ್ನವ್ವ*

*ಹೋಗುತೀನಿ ಹುಳಿಯಾರ ಒಡವೀಗೆ*

ತಾನು ಮಾಡಿಕೊಂಡ ಹರಕೆಯೊಂದು ದುರಂತಕ್ಕೆ ಕಾರಣವಾಯಿತು ಎಂಬುದನ್ನು ಒಪ್ಪಿಕೊಳ್ಳುತ್ತಾಳೆ. ಚೆನ್ನಮ್ಮ ಕೆರೆ ತಾನಾಗಿಯೇ ಕೆಂಚವ್ವನನ್ನು ಬಯಸಲಿಲ್ಲ. ಮಕ್ಕಳ ಫಲವನ್ನು ಕೊಟ್ಟರೆ ಹಾಗೂ ಬಂಜೆತನವನ್ನು ಹೋಗಲಾಡಿಸಿದರೆ ಹುಟ್ಟಿದ ಮಗುವಿನೊಡನೆ ಬಲಿಯಾಗುತ್ತೇನೆ ಎಂಬ ಹರಕೆಯೊಂದು ಹೊತ್ತ ಪ್ರಸಂಗ ಇಲ್ಲಿ ಹುಳಿಯಾರು ಕೆರೆಯ ಆಹಾರವಾಗಿದೆ.

ಕೆಂಚವ್ವ ಯಾರ ಮಾತನ್ನು ಕೇಳದೆ ಕೆರೆಗೆ ಬಲಿಯಾಗಲು ಮುಂದಾದಳು. ಅವಳು ತನ್ನ ಗಂಡನಿಂದ ಮಾವನಿಂದ ಅತ್ತೆಯಿಂದ ಗುರು ಹಿರಿಯರಿಂದ ವೀಳ್ಯಾ ಪಡೆದು ಮಡಿಲಲ್ಲಿರಿಸಿಕೊಂಡು ಮಾವನ ಅಪ್ಪಣೆಯನ್ನು ಕೇಳಿ ಬಲಿಯಾಗಲು ಮುಂದಾಗುತ್ತಾಳೆ.

*ಹೋಗುತ್ತಾಳೆ ಕೆಂಚವ್ವ ಹುಳಿಯಾರ ಒಡವೀಗೆ*

*ಗಂಗಮ್ಮನ ಪೂಜೆ ಮಾಡುತ್ತಾಳೆ ಕೆಂಚವ್ವ*

*ಹೆಜ್ಜೆ ಮೊಳಕ ನೀರಿಗಿಳಿದಾಳೆ*

*ಕಾಲುಗಳ ಪಿಲಿತಾಲ್ಲೂಕು ಆಳುದಾಳು ಕೆಂಚವ್ವ*

*ಅವರತ್ತೆ ಕೈಯಾಗಿ ಕೊಡುತಾಳೆ*

*ಕೊಳ್ಳಾಗಳ ಪದಕ ಅಳುದಾಳೆ ಕೆಂಚಮ್ಮ*

*ಅವರತ್ತೆ ಕೈಯಾಗಿ ಕೊಡುತಾಳೆ*

*ಮುಂದೆ ಬರುವಳಿಗೆ ಮಡಗವ್ವ*

ಎಂದು ಹೇಳುತ್ತಾ ತನ್ನ ಎಲ್ಲಾ ಒಡವೆಗಳನ್ನು ಬಿಚ್ಚಿ ಅತ್ತೆ ಕೈಗೆ ಕೊಟ್ಟು ಮುಂದೆ ಬರುವ ಸೊಸೆಗೆ ಕೊಡು ಎಂದು ಹೇಳಿ ಹೊರಟು ಹೋಗುತ್ತಾಳೆ. ಅವಳ ನೆತ್ತಿ ಮುಳುಗುವ ಮುನ್ನ ಮಗುವನ್ನು ಮೇಲೆತ್ತಿ ಎಲ್ಲರಿಗೂ ತೋರಿಸಿ ಕಣ್ಮರೆಯಾಗುತ್ತಾಳೆ. ಕೊನೆಯಲ್ಲಿ ಹೇಳುವಂತಹ ಮಾತು ಅರ್ಥ ಗರ್ಭಿತವಾಗಿದೆ.

***ಬಾಲಾನ ತೆಗೆದು ತೋರುತಾಳೆ ಕೆಂಚವ್ವ***

***ಊರು ಮುಂದಿರುವ ಹುಣಸೇಯ ಮರಗಳಿಗೆ***

***ಬರಿದೊಟ್ಟಿಲ ತಂದು ತಗುಲ್ತಾಕಿ***

ಗಂಗೆಯಲ್ಲಿ ಕೆಂಚವ್ವ ಮುಳುಗಿ ಹೋದರೂ, ಅದೃಶ್ಯಗಳಾಗಿ ಅಲ್ಲಿ ಸಂಚರಿಸುತ್ತಿರುತ್ತಾಳೆ. ನಮ್ಮ ನಾಡಿನಲ್ಲಿ ಕೆರೆಗೆ ಹಾರವಾದ ಅನೇಕ ಕೆರೆಗಳ ರೋಚಕ ಐತಿಹ್ಯಗಳು ಹೆಣ್ಣನ್ನು ಒತ್ತಾಯ ಪೂರ್ವಕವಾಗಿ ಕೆರೆಗೆ ಹಾರವಾಗಿಸಿರುವಂತಹ ನಿದರ್ಶನವನ್ನು ತಿಳಿಸುತ್ತದೆ. ಆದರೆ ಹುಳಿಯಾರು ಕೆಂಚಮ್ಮನ ಐತಿಹ್ಯದಲ್ಲಿ ಕೆಂಚಮ್ಮ ಒಬ್ಬ ಆದರ್ಶ ಸ್ತ್ರೀಯಾಗಿ ಬಿಂಬಿತವಾಗಿದ್ದಾಳೆ. ಕೆರೆಗೆ ಹಾರ ಎಂಬುದೇ ಬಲಿ ಎಂಬುದಾಗಿದೆ. ಹಾಗಾಗಿ ಇಲ್ಲಿ ಎಂಭತ್ತರ ದಶಕದಲ್ಲಿ ಗುರುತಿಸಿರುವ ಕೆರೆಗೆ ಹಾರದ ಕಥನವನ್ನೇ ಹೋಲುವ ಸತ್ಯ ಘಟನೆಯನ್ನು ಹುಳಿಯಾರಿನ ಕೆಂಚಮ್ಮನ ಕೆರೆಯೂ ಸಹ ಹೊಂದಿದೆ. ಹುಳಿಯಾರು ಕೆಂಚಮ್ಮನ ಕಥೆ ಅಸಹಾಯಕ ಹೆಣ್ಣು ಮಗಳೊಬ್ಬಳು ಹಿರಿಯರ ಒತ್ತಡಕ್ಕೆ ಸಿಕ್ಕಿ ಕೆರೆಗೆ ಬಲಿಯಾಗುವ ಒಂದು ಸಾಧರಣ ಘಟನೆಯಾಗಿರದೇ, ತಾನಾಗಿಯೇ ತಾಯಿಯ ಮಾತನ್ನು ನೆರವೇರಿಸುವುದಕ್ಕಾಗಿ ತನ್ನ ಸುಖ ಸಂಸಾರವನ್ನು ತೊರೆದು ಊರ ರಕ್ಷಣೆಗಾಗಿ ಹಾಗೂ ಊರ ಕೆರೆಯಲ್ಲಿ ನೀರು ಸದಾ ಕಾಲ ನಿಲ್ಲುವಂತ ದೇವತೆಯಾಗುತ್ತಾಳೆ, ಇಲ್ಲಿ ಅವಳು ಗಂಗೆಯ ಪಾಲಾದ ಪ್ರಸಂಗ ಗೌಪ್ಯವಾಗಿ ನಡೆದು ಹೋಗದೆ ಎಲ್ಲರ ಎದುರಿನಲ್ಲಿ ಜರುಗುತ್ತದೆ! ಕೂಡಿದ ಪತಿಯ, ಹೆತ್ತ ತಾಯಿಯ ಕಣ್ಣೆದುರಿನಲ್ಲಿ, ಅತ್ತೆ ಮಾವಂದಿರ ಸಾನಿಧ್ಯದಲ್ಲೇ ಮಗುವಿನೊಡನೆ ಗಂಗೆಯಲ್ಲಿ ಸೇರುತ್ತಾಳೆ! ತನ್ನ ಆದರ್ಶವನ್ನು ಉಳಿಸಿಕೊಳ್ಳುತ್ತಾಳೆ.




**ಕೆಂಚಮ್ಮನವರ ದೇವಸ್ಥಾನ**



**ಕೆಂಚಮ್ಮ ಮಗುವನ್ನು ತೂಗುತ್ತಿದ್ದ ಹುಣಿಸೆಮರ**



**ಹುಳಿಯಾರು ಕೆಂಚಮ್ಮನ ಕೆರೆಯ ವಿಹಂಗಮ ದೃಶ್ಯ**

**ಪರಾಮರ್ಶನ ಗ್ರಂಥಗಳು**


- ಬಸವರಾಜ ಮಲಶೆಟ್ಟಿ. (1964). ಕೆರೆಗೆ ಹಾರ ಆಶಯದ ಜಾನಪದ ಹಾಡುಗಳು. ಸಂಕ್ರಮಣ, ಕರ್ನಾಟಕ ಭಾರತಿ. ಸಂ.6 (3).
- ಗಂಗಾನಾಯಕ್ ಕೆ.ಎನ್. (2012). ಪಾಳೆಗಾರರ ಶಾಸನಗಳು. ಸಂ.1. ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಗೋವಿಂದರಾಜು ಸಿ.ಆರ್. (ಸಂ) (2011). ಚರಿತ್ರೆ ಅಧ್ಯಯನ. ಸಂ.6. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಹೆಬ್ಬಾಲೆ ಕೆ. ನಾಗೇಶ್ (2016). ಜಾನಪದ ಕರ್ನಾಟಕ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕೆರೆಗಳನ್ನು ಮರೆಯದಿರಿ. (1989). ಹೊಸಬಾಳು ಪತ್ರಿಕೆ. ಬೆಂಗಳೂರು.
- ಲಕ್ಷ್ಮಣಯ್ಯ (1994). ಶ್ರೀ ಕೆಂಚಮ್ಮ ದೇವತೆ. ಗಿರಿಜಾ ಪ್ರಕಾಶನ, ಚಿಕ್ಕನಾಯಕನ ಹಳ್ಳಿ.
- ಲಕ್ಷ್ಮಣ್ ತೆಲಗಾವಿ. (2003). ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮುರಿಗೆಪ್ಪ ಎ. (2013). ದಕ್ಷಿಣ ಭಾರತೀಯ ಜಾನಪದ ಕೋಶ. ಸಂ.1 ಮತ್ತು 2, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶೈಲಜಾ ಬಿ.ಎಂ. (2003). ಪಾಳೆಯಗಾರಾರ ಶಾಸನಗಳು. ಸಂ.1. ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ತುಮಕೂರು ಜಿಲ್ಲಾ ಗ್ಯಾಸೆಟಿಯರ್ (2017). ಸಂ.ಚಂದ್ರಶೇಖರ್ ಎನ್. ಬೆಂಗಳೂರು.
- ವೆಂಕಟೇಶಯ್ಯ ವೈ.ಜಿ. (2008). ಯಲಗಲವಾಡಿ ಗ್ರಾಮ ಸಂಸ್ಕೃತಿಯ ಗ್ರಹಿಕೆಗಳು. ಸುಶೀಲ ಪ್ರಕಾಶನ. ಕುಣಿಗಲ್.


**ವಕ್ತೃ ವಿವರ**

- ಚೆನ್ನಬಸಮ್ಮ, ವಯಸ್ಸು 76, ಹುಳಿಯಾರು, ಜೂನ್ 22, 2015.
- ಹನುಮಂತರಾಯಪ್ಪ, ವಯಸ್ಸು 52, ಬಿಳಗುಲಿ, ಜೂನ್ 22, 2015.